ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ**21/2017**

ದಿನಾಂಕ **03.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂ-1

ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ. ಎನ್.ಎನ್. ಆರ್ ವಕೀಲರಿಂದಃ

ನನ್ನ ತಂದೆಯ ಹೆಸರು ಡಿ.ಎನ್. ಕೃಷ್ಣ ಮೂರ್ತಿ. ನನ್ನ ತಾಯಿಯ ಹೆಸರು ಡಿ.ಕೆ. ಸುಶೀಲಮ್ಮ. ನಾವು 4 ಜನ ಮಕ್ಕಳು 2 ಹೆಣ್ಣು 2 ಗಂಡು. ನನ್ನ ತಾಯಿಯ ತವರು ಮನೆ ವಳ್ಳೂರು. ನನ್ನ ತಾಯಿಯ ಹೆಸರು ವೆಂಕಟರಮಣಯ್ಯ ಶೆಟ್ಟಿ ಅವರನ್ನು ತಾಲಂಕಿ ವೆಂಕಟರಮಣಯ್ಯ ಎಂದೂ ಸಹ ಕರೆಯುತ್ತಾರೆ. ನಮ್ಮ ತಂದೆ ದಾವಾ ಸ್ವತ್ತನ್ನು ನಾವು ಸಣ್ಣವರಿದ್ದಾಗಲೇ ಕೊಂಡು ಕೊಂಡಿದ್ದಾರೆ. ಇಸವಿ ಸರಿಯಾಗಿ ನನಗೆ ಹೇಳಲು ಆಗುವುದಿಲ್ಲ. ನನ್ನ ತಂದೆ ದಾದಲೂರಪ್ಪ ರವರಿಂದ 1985 ರಲ್ಲಿ ಕೊಂಡು ಕೊಂಡಿದ್ದಾರೆ. ನನ್ನ ತಂದೆ ಕ್ರಯಕ್ಕೆ ಪಡೆದ ಬಗ್ಗೆ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ನನ್ನ ತಂದೆ ಕ್ರಯಕ್ಕೆ ಪಡೆದ ಬಗ್ಗೆ ಯಾವ ದಾಖಲೆ ಹಾಜರುಪಡಿಸಿದ್ದೇನೆ ಎಂದು ನನಗೆ ನೆನಪಿಲ್ಲ ನನ್ನ ತಂದೆ ಸೈಕಲ್ ಶಾಪ್ ನಡೆಸಲು ಪಂಚಾಯ್ತಿಯಿಂದ ಪಡೆದ ಲೈಸನ್ಸ್ ನ್ನು ನಾನು ಹಾಜರುಪಡಿಸಿದ್ದೇನೆ. ನಾನು ಆ ರೀತಿ ದಾಖಲೆಗಳನ್ನು ಹಾಜರುಪಡಿಸಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ದಾವಾ ಮನೆಯನ್ನು ಕ್ರಯ ಮಾಡಿಕೊಂಡಿಲ್ಲ, ಆದಾಗ್ಯೂ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮನೆ ಕಟ್ಟಿದ ಬಗ್ಗೆ ಕಟ್ಟಡ ಪರವಾನಗಿಯನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.

2. ದಾವಾ ಆಸ್ತಿ ಮೂಲ ವೆಂಕಟಾಪುರದ ರಂಗಮ್ಮ ಕೋಂ ದಾದಲೂರಪ್ಪ ರವರಿಗೆ ಸೇರಿದ ಮನೆ ಜಾಗ ಎಂದರೆ ಸರಿ. ದಿ.22.12.1971 ರಲ್ಲಿ ತಾಲಂಕಿ ವೆಂಕಟರಾಮಯ್ಯ ಎನ್ನುವವರಿಗೆ ರೂ.1,000/- ಹಣಕ್ಕೆ ರಂಗಮ್ಮ ಕೋಂ ದಾದಲೂರಪ್ಪ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನ್ನ ತಾತನ ಹೆಸರಿನಲ್ಲಿ ನನ್ನ ತಂದೆಯೇ ಹಣ ಕೊಟ್ಟು

ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ದಾವಾದಲ್ಲಿ ನನ್ನ ತಂದೆ ನನ್ನ ತಾತನ ಹೆಸರಿನಲ್ಲಿ ಖರೀದಿಸಿದ ದಾವಾ ಆಸ್ತಿ ಎಂದು ಬರೆಸಿರುವುದಿಲ್ಲ. ಕ್ರಯದಾರರಾದ ತಾಲಂಕಿ ವೆಂಕಟರಾಮಯ್ಯ ನನ್ನ ತಾಯಿಯ ತಂದೆ. ನನ್ನ ತಾಯಿಯ ತಂದೆಯ ಹೆಸರಿಗಾದ ಕ್ರಯ ಪತ್ರದಲ್ಲಿ ನನ್ನ ತಂದೆ ಹಣ ಕೊಟ್ಟ ಬಗ್ಗೆ ನಮೂದು ಇದೆಯಾ ಎಂದರೆ ನಾನು ಕ್ರಯ ಪತ್ರ ನೋಡಿರುವುದಿಲ್ಲ. ದಿ.03.12.1970 ರಲ್ಲಿ ನಾನು ಜನಿಸಿರುತ್ತೇನೆ. ನನ್ನ ಕ್ರಯಕ್ಕೆ ಪಡೆದಿದ್ದಾರೆ ಎಂದು ಹೇಳವ ಕಾಲಕ್ಕೆ ನನಗೆ ಒಂದು ವರ್ಷ ಸಹ ಆಗಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ತಾಲಂಕಿ ವೆಂಕಟರಾಮಯ್ಯ ಅವರ ಹಣದಿಂದ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಸಾಕ್ಷಿಯ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.</u>

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ